# ಶರಣನ ನಡೆ

ವಚನಕಾರರು ತಮ್ಮ ವಚನಗಳಲ್ಲಿ ನಡೆಗೂ ನುಡಿಗೂ ಅಂತರವಿರಬಾರದು ಎಂದು ಪ್ರತಿಪಾದಿಸಿದ್ದಾರೆ. ನುಡಿಯೊಳಗಾಗಿ ನಡೆಯಬೇಕೆಂಬ ಸರಳ ಸಿದ್ಧಾಂತದ ಆಶಯ ಎಲ್ಲ ವಚನಕಾರರಲ್ಲೂ ಎದ್ದು ಕಾಣುವ ನೀತಿಯಾಗಿದೆ. ನಡೆ ಮತ್ತು ನುಡಿಯ ನಡುವೆ ಬಿರುಕುಂಟಾದರೆ ಅದು ವ್ಯಕ್ತಿತ್ವದ ವಿಘಟನೆಗೆ ಕಾರಣವಾಗುತ್ತದೆ ಎಂಬುದನ್ನು ಅವರು ಬಲ್ಲವರಾಗಿದ್ದರು.

ಬಸವನನ್ನು ಒಳಗೊಂಡಂತೆ ಶರಣರು ಭಕ್ತಿಯನ್ನು ಮೇಲುಕೀಳಿಲ್ಲದ ಸಮಾಜವನ್ನು ಒಂದುಗೂಡಿಸುವ ಅಸ್ತ್ರವನ್ನಾಗಿ ರೂಪಿಸಿದರು. ಶುದ್ಧ ಭಕ್ತಿಯನ್ನು ಅಡಿಗಲ್ಲಾಗಿಸಿ ಕಟ್ಟ ಹೊರಟ ಶರಣ ಚಳವಳಿಯಲ್ಲಿ ವರ್ಣ, ವರ್ಗ, ಲಿಂಗ ಭೇದಗಳಿಂದಾಚೆ ಸರ್ವಸಮಾನತೆಯ ಸಮಾಜದ ಕನಸಿತ್ತು.

ಹೀಗಾಗಿ ವಚನಕಾರರು ರೂಪಿಸಿದ ಕಾಯಕ, ದಾಸೋಹ, ಅಂತರವಿಲ್ಲದ ನಡೆನುಡಿಗಳು ಬದುಕಿನ ಮೌಲ್ಯಗಳಾಗಿ ಸರಳ ಸಂವಿಧಾನವನ್ನು ರೂಪಿಸಿದವು. ಬಡವ–ಬಲ್ಲಿದನೆಂಬ, ಶ್ರೇಷ್ಠ–ಕನಿಷ್ಠವೆಂಬ, ಜಾತಿ–ವಿಜಾತಿ ಎಂಬ ವರ್ಗೀಕರಣದಿಂದ ಈ ಸಮಾಜ ಮುಕ್ತವಾಗಿತ್ತು. ಕೀಳರಿಮೆಯಿಲ್ಲದೆ ತಮ್ಮ ಕಾಯಕ ಮಾಡುತ್ತಲೇ ಘನ ಶರಣರಾಗಿ ಬದುಕಲು ಸಾಧ್ಯವಿದೆ ಎಂಬುದನ್ನು ವಚನಕಾರರು ನಿರೂಪಿಸಿದರು. ಹೊಟ್ಟೆ ಹೊರೆಯಲು ಒಂದು ಕಾಯಕ ಬೇಕು. ಕಾಯಕ ಮಾಡದವನಿಗೆ ಕೂತು ತಿನ್ನುವ ಅಧಿಕಾರವಿಲ್ಲ ಎಂಬುದು ಅವರು ಕಂಡುಕೊಂಡ ಸತ್ಯವಾಗಿತ್ತು. ಕ್ಷೌರಿಕರು, ಒಕ್ಕಲಿಗರು, ಮೀಂಗುಲಿಗರು, ವಾದ್ಯ ನುಡಿಸುವವರು, ಹಡಪದರು, ತೋಟ ತಳವಾರರು, ಹಗ್ಗ ಹೊಸೆಯುವವರು – ಹೀಗೆ ಹಲವು ಕಾಯಕ ವರ್ಗಗಳಿಗೆ ಸೇರಿದವರೆಲ್ಲರಿಗೂ ದೈವ ಶಿವನೇ ಆಗಿದ್ದನು. ತನುವಿನ ಹಸಿವೆಯನ್ನು ನೀಗುವ ದುಡಿಮೆ ಹಾಗೂ ಮನದ ಹಸಿವನ್ನು ನೀಗುವ ಅನುಭಾವ ಅವರಿಗೆ ಬೇರೆಬೇರೆಯಾಗಿ ಕಂಡಿರಲಿಲ್ಲ.

ಕಾಯಕವನ್ನು ಎಂದೂ ನಿರಾಕರಿಸದ ಶರಣರು ಲೋಕದೊಳಗಿದ್ದೂ ಲೋಕದ ಕಂಟಕಗಳನ್ನು ಮೀರುವುದು ಹೇಗೆ ಎಂಬುದರ ಬಗ್ಗೆ ಚಿಂತಿಸಿದರು. ಶರಣನ ದಾರಿ ತನ್ನ ನುಡಿಯ ಮೇಲೆ ನಿಂತು ನಡೆಯಬೇಕಾದ ಸತ್ಯದ ದಾರಿಯಾಗಿತ್ತು. ಒಳಗೂ ಬೆಳಕು, ಹೊರಗೂ ಬೆಳಕನ್ನು ಒಳಗೊಂಡ ಲೋಕ ಅದಾಗಿತ್ತು. ಶುದ್ಧಿ ಎಂಬ ಪದ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಎಂಬ ಎರಡೂ ಪಾರದರ್ಶಕತೆಯನ್ನು ಒಳಗೊಂಡಿತ್ತು.

ಸಾಮಾನ್ಯವಾಗಿ ಎರಡು ಮಾರ್ಗಗಳಲ್ಲಿ ನಿಂತು ವಚನಕಾರರು ಮಾತನಾಡುತ್ತಾರೆ. ಲೋಕದ ನಡವಳಿಕೆ ಮೀರಿದ ದೈವದ ದಾರಿಯ ನಡೆ ಒಂದಾದರೆ, ಲೋಕದ ನಡೆಗಿಂತ ಭಿನ್ನವಾಗಿ ತಾನೇ ರೂಪಿಸಿಕೊಂಡ ಶರಣನ ದಾರಿ ಇನ್ನೊಂದಾಗಿತ್ತು. ಹೀಗಾಗಿ ಬಸವನಾದಿಯಾಗಿ ಎಲ್ಲ ಶಿವಶರಣರಿಗೂ ಖಾಸಗಿ ಎಂಬ ಬದುಕು ಇರಲಿಲ್ಲ. ದಾಂಪತ್ಯವನ್ನೂ ಒಳಗೊಂಡಂತೆ ಅನುಭಾವದ ಬದುಕೂ ಸಹ ತೆರೆದ ಪುಸ್ತಕವಾಗಿತ್ತು. ಎಲ್ಲವೂ ಪಾರದರ್ಶಕ, ಬಯಲಲ್ಲಿ ಕಟ್ಟಿಕೊಂಡ ಗಾಜಿನ ಮನೆಯಂತೆ. ಶರಣ ಧರ್ಮ ಬಯಲನ್ನೇ ಆಲಯವನ್ನಾಗಿ ಒಪ್ಪಿಕೊಂಡಿರುವುದರಿಂದ ಬಯಲಲ್ಲೇ ಬಯಲಾಗಿ ನಿಂತು ತನ್ನ ಬಯಲುತನವನ್ನು ನಿರ್ವಹಿಸಿಕೊಳ್ಳಬೇಕಾದ ಅಗತ್ಯವಿತ್ತು. ಇಲ್ಲಿ ಖಾಸಗಿಯಾದ ಸಂಬಂಧಗಳು ಸಾಧ್ಯವಿಲ್ಲ. ದಾಂಪತ್ಯವೂ ಕೂಡ ಶರಣ ಸತಿ, ಲಿಂಗಪತಿ ಎಂಬ ಕಲ್ಪನೆಯಲ್ಲಿಯೇ ಕಂಡುಕೊಳ್ಳಬೇಕಾದ ಧರ್ಮವಾಗಿದೆ.

ನಿಜಶರಣನ ಗತಿಯೇ ಬೇರೆ, ಲೋಕಗತಿಯೇ ಬೇರೆ. ಲೋಕಕ್ಕೆ ಜ್ಞಾನಿ ಮರುಳನಾಗಿದ್ದಾನೆ. ಜ್ಞಾನಿಗೆ ಲೋಕ ಮರುಳಾಗಿದೆ. ತಾನು ಜೀವಿಸಲೇಬೇಕಾದ ಲೋಕದೊಂದಿಗಿನ ಸಂಬಂಧ ಹೇಗಿರಬೇಕು, ಅಲ್ಲಿನ ಆಕರ್ಷಣೆಗಳಾವುವು, ಅಲ್ಲಿನ ಸಂಕಟಗಳಾವುವು, ಭಕ್ತನೊಬ್ಬ ಇದ್ದೂ ಇಲ್ಲದ ಹಾಗೆ ಲೌಕಿಕ ಸಂಸಾರದಲ್ಲಿ ಮುಳುಗುವುದು ಹೇಗೆ ಮತ್ತು ಹೊರಬರುವುದು ಹೇಗೆ ಎಂಬ ವಿಚಾರಗಳು ಕೇವಲ ಅನುಭಾವಿಗಳದು ಮಾತ್ರವಲ್ಲ, ಸಾಮಾನ್ಯನೊಬ್ಬನ ಲೌಕಿಕ ವ್ಯವಹಾರ ಸಹ ಆಗಿರುತ್ತವೆ. ಇದನ್ನೇ ದಾಸರು 'ಈಸಬೇಕು ಇದ್ದು ಜೈಸಬೇಕು' ಎಂದು ಹೇಳಿದ್ದು.

ಲೋಕದಲ್ಲಿ ಹುಟ್ಟಿದ ಬಳಿಕ ಹಲವು ಸಂಗತಿಗಳಿಗೆ ಎದುರಾಗಬೇಕಾಗುತ್ತದೆ. ಈ ಬದುಕಿನಲ್ಲಿ ಸೌಂದರ್ಯವಿದೆ, ಸೋಜಿಗಗಳಿವೆ, ಜಿಗುಪ್ಸೆಯಿದೆ. ಇವೆಲ್ಲವನ್ನು ಶರಣರು ಗೆಲ್ಲಲೇಬೇಕು. ಎದುರಾಗುವ ಬೆಂಕಿಯಲ್ಲಿ ಬೆಂದು ಪುಟಕ್ಕಿಟ್ಟ ಚಿನ್ನವಾಗಬೇಕು. ಸಂಸಾರವೆಂಬ ಸಾಗರದಲ್ಲಿ ಮುಳುಗಿ ಅಲ್ಲಿನ ನೊರೆತೊರೆಗಳೊಂದಿಗೆ ಗುದ್ದಾಡುತ್ತಾ ಬದುಕಿ ಗೆಲ್ಲುವುದೇ ಅವನ ಬದುಕಿನ ಗುರಿ. ಹೀಗಾಗಿ ಶಿವನೆಂಬ ದೈವ ಈ ಸಾಗರವನ್ನು ದಾಟಿಸುವ ಹಾಯಿದೋಣಿಯಾಗಿದ್ದಾನೆ. ದೈವದ ಸಾಂಗತ್ಯವಿರುವುದರಿಂದಲೇ ನೊರೆತೊರೆಗಳ ಎಡತಾಗುವಿಕೆ 'ಶಿರದುದ್ದವೇ ಉರದುದ್ದವೇ' ಎಂದು ಪ್ರಶ್ನಿಸಿ ಮುನ್ನಡೆಯುವ ತಾಳ್ಮೆಯನ್ನು ಅವನಿಗೆ ಕಲಿಸಿಕೊಡುತ್ತದೆ.

ಚಂದಿಮರಸ ತನ್ನ ವಚನವೊಂದರಲ್ಲಿ 'ಲೋಕವ ತಾ ಹೇಸಿದ ಬಳಿಕ, ತನ್ನ ಲೋಕ ಹೇಸುವಂತಿರಬೇಕು' ಎನ್ನುತ್ತಾನೆ. ಲೋಕದ ಹೇಸಿಗೆ ಹುಟ್ಟಿಸುವ ಸಂಗತಿಗಳಿಗೆ ತಾನು ಬೆನ್ನು ತೋರಿದಂತೆ ಲೋಕದ ಈ ಹೇಸಿಗೆಯ ಸಂಗತಿಗಳು ಸಹ ತನ್ನಿಂದ ಅಂತರವಿಟ್ಟುಕೊಳ್ಳಬೇಕು ಎನ್ನುತ್ತಾನೆ. ಲೋಕದೊಂದಿಗಿನ ಶೃಂಗಾರ, ಪ್ರಣಯ ಇತ್ಯಾದಿ ಸಂಗತಿಗಳಿಂದ ತಾನು ದೂರ ಸರಿದ ಮೇಲೆ ಅವು ತನ್ನನ್ನು ಕಾಡಬಾರದು.

ವಚನಕಾರರು ನಿಸ್ಸಾರವಾದ ಜ್ಞಾನವನ್ನಾಗಲೀ ಅಲೌಕಿಕತೆಯನ್ನಾಗಲೀ ತಮ್ಮ ಮಾತು ಮತ್ತು ಕೃತಿಗಳಲ್ಲಿ ಹೇಳಹೋಗುವುದಿಲ್ಲ. ದಾಂಪತ್ಯ, ದೈವ, ಅನುಭಾವ ಇವೆಲ್ಲವೂ ಭಕ್ತನೊಬ್ಬ ಕ್ರಮಿಸಲೇಬೇಕಾದ ದಾರಿಗಳು. ಸಂಸಾರವನ್ನು ಸಾಗಿಸುತ್ತಲೇ ಮುಕ್ತಿಯನ್ನು ಪಡೆಯಬಹುದು ಎಂದು ಕಂಡುಕೊಂಡದ್ದರಿಂದಲೇ 'ಶರಣಸತಿ ಲಿಂಗಪತಿ' ಎಂಬ ಕಲ್ಪನೆಗೆ ತಮ್ಮನ್ನು ತೆರೆದುಕೊಂಡರು. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು ಬದುಕಿದರು. ಲೋಕದೊಳಗಿದ್ದೂ ಇಲ್ಲವಾಗುವಿಕೆಯ ಬಗ್ಗೆ ತಮ್ಮನ್ನು ಮತ್ತೆಮತ್ತೆ ಮರು ಪರೀಕ್ಷೆಗೆ ಒಡ್ಡಿಕೊಂಡರು. ಈ ಹುಡುಕಾಟದ ಅಭಿವ್ಯಕ್ತಿಗಳೇ ಮುಂದೆ ಸರಳಗನ್ನಡದ ಅಪೂರ್ವವಾದ ವಚನಗಳೆನಿಸಿಕೊಂಡವು.

■ **ಅಮೃತಮತಿ**

## ಮಾತೇ ಮುತ್ತು

- ನಾನು ಪ್ರತಿಮೆಗಳಲ್ಲಿ ಅಲ್ಲ, ಪುಸ್ತಕಗಳಲ್ಲಿ ಸಿಗುತ್ತೇನೆ. ನನ್ನನ್ನು ಪೂಜೆ ಮಾಡುವುದರಿಂದ ಅಲ್ಲ, ಓದುವುದರ ಮೂಲಕ ಸಿಗುತ್ತೇನೆ.
  —ಬಿ.ಆರ್. ಅಂಬೇಡ್ಕರ್

- ನಿನ್ನಿಂದ ಸಾಧ್ಯವಿಲ್ಲ ಎಂದು ಹೇಳುವವರು ಬಹಳಷ್ಟು ಜನ ಇರುತ್ತಾರೆ. ಅಂತಹವರತ್ತ ತಿರುಗಿ ನೀವು ಹೇಳಬೇಕಾದುದು ಇಷ್ಟೆ. ನನ್ನನ್ನು ಗಮನಿಸುತ್ತೀರಿ.
  —ಲೇನ್ ಬೀಚ್ಲೆ

- ತೀವ್ರ ಸಂಕಷ್ಟಗಳು ಒಬ್ಬ ಸಾಮಾನ್ಯ ಮನುಷ್ಯನನ್ನು ಅಸಾಮಾನ್ಯ ಗುರಿ ಮುಟ್ಟಲು ಸನ್ನದ್ಧಗೊಳಿಸಬಲ್ಲವು.
  —ಅರುಣಿಮಾ ಸಿನ್ಹಾ

- ನಾಳೆ ಏನೆಂಬ ಪ್ರಶ್ನೆಗಿಂತಲೂ ಇಂದು ಹೇಗೆ ಎನ್ನುವ ಪ್ರಶ್ನೆ ನಮಗೆ ಮಹತ್ತರವಾಗಿ ಕಾಣಬೇಕು.
  —ಶಿವರಾಮ ಕಾರಂತ

- ಕೋಪ ಎಂಬುದು ಆ್ಯಸಿಡ್ ಇದ್ದಂತೆ. ಅದು ಪ್ರವಹಿಸಿದ ಕಡೆಗಿಂತ ಹೆಚ್ಚಾಗಿ, ಅದನ್ನು ಸಂಗ್ರಹಿಸಿಟ್ಟ ಪಾತ್ರೆಗೇ ಹೆಚ್ಚು ಹಾನಿ ಉಂಟುಮಾಡುತ್ತದೆ.
  —ಮಾರ್ಕ್ ಟ್ವೇಯ್ನ್

- ಜಗತ್ತಿನಲ್ಲಿ ಶಾಂತಿ ನೆಲೆಸಬೇಕೆಂದರೆ ಮಕ್ಕಳಿಗೆ ಮೊದಲು ಶಿಕ್ಷಣ ನೀಡಬೇಕು.
  —ಮಹಾತ್ಮ ಗಾಂಧಿ

- ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವುದಿಲ್ಲ.
  —ಪೂರ್ಣಚಂದ್ರ ತೇಜಸ್ವಿ